ಅ) ಶಿರಾದಿಂದ-ಮುಳಬಾಗಿಲು ರಸ್ತೆಯ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಭೂ ಸಾರಿಗೆ ಇಲಾಖೆಯು ಅಂತರರಾಜ್ಯ ಪ್ರಾಮುಖ್ಯತೆ ಯೋಜನೆಯಡಿ ಹಣ ಮಂಜೂರು ಮಾಡಿರುತ್ತದೆ.

ಆ) ರೂ. 1,98,40,000-00 ಗಳಿಗೆ ದಿನಾಂಕ: 18-3-97ರಂದು ಮಂಜೂರಾಗಿದೆ.

ಇ) 10 ಕಿ.ಮೀ. ಗಳಷ್ಟು ಡಬ್ಲ್ಯು.ಬಿ.ಎಂ ಮತ್ತು ಮಿಕ್ಸ್ ಸೀಲ್ ಕೆಲಸವು ಮುಗಿದು ಉಳಿದ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಕೊಡಗು ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಹಣ

2885:(3691)

ಶ್ರೀ ಡಿ.ಎನ್.ಮಾದಪ್ಪ (ಮಡಕೇರಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸೇರಿದ ರಸ್ತೆಯ ವಿಸ್ತೀರ್ಣವೆಷ್ಟು?

ಆ) ಕಳೆದ ಮೂರು ವರ್ಷಗಳಿಂದ ಈ ರಸ್ತೆಯ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು? ಹಳೆಯ ರಸ್ತೆ ದುರಸ್ತಿಗೆ ಕಿಮಿ 1ಕ್ಕೆ ಬಿಡುಗಡೆ ಮಾಡುವ ಹಣವೆಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ರಾಜ್ಯ ಹೆದ್ದಾರಿ 310.8 ಕಿಮಿ ಮತ್ತು ಜಿಲ್ಲಾ ಮುಖ್ಯ ರಸ್ತೆ 804 ರೂ. ಒಟ್ಟು 1114.8 ಕಿಮಿ ಉದ್ದ ರಸ್ತೆ ಬರುತ್ತದೆ.

ಆ) ಕಳೆದ ಮೂರು ವರ್ಷಗಳಿಂದ ಈ ರಸ್ತೆಯ ಅಭಿವೃದ್ಧಿಗೆ ಯೋಜನೆ. ಯೋಜನೇತರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.

ಲೆಕ್ಕ ಶೀರ್ಷಿಕೆ	ವರ್ಷ		
	95-96 ಲಕ್ಷದಲ್ಲಿ	96-97 ಲಕ್ಷದಲ್ಲಿ	97-98 ಲಕ್ಷದಲ್ಲಿ
5054 ರಸ್ತೆ ಮತ್ತು ಸೇತುವೆ ರಸ್ತೆಗೆ ನಿರ್ಮಾಣ ಅಭಿವೃದ್ಧಿ ಮತ್ತು ಕೇತ್ರಾವಾರು ಕಾಮಗಾರಿ ಸೇರಿ.	64.10	40.10	12.10
3054 ರಸ್ತೆ ಮತ್ತು ಸೇತುವೆ ಯೋಜನೇತರ	153.15	182.67	369.55

ಕಳೆದ ಮೂರು ವರ್ಷಗಳಲ್ಲಿ ರಸ್ತೆಗಳ ದುರಸ್ತಿಗೆ ಬಿಡುಗಡೆ ಮಾಡಿದ ಹಣ ವಿವರ ಈ ಕೆಳಗಿನಂತಿದೆ. ಕಿ.ಮೀ.ಆಧಾರಿತ ಅನುದಾನ ಬಿಡುಗಡೆ: ವೆಚ್ಚ ಮಾಡುವುದಿಲ್ಲ.

ಲೆಕ್ಕ ಶೀರ್ಷಿಕೆ	1995-96	1996-97	1997-98
	ಬಿಡುಗಡೆ ಮಾಡಿದ ಅನುದಾನ ಲಕ್ಷದಲ್ಲಿ	ಬಿಡುಗಡೆ ಮಾಡಿದ ಅನುದಾನ ಲಕ್ಷದಲ್ಲಿ	ಬಿಡುಗಡೆ ಮಾಡಿದ ಅನುದಾನ ಲಕ್ಷದಲ್ಲಿ
3054 ರಸ್ತೆ ಮತ್ತು ಸೇತುವೆ 03 ರಾ.ಹೆದ್ದಾರಿ 51 ಸಾ.ದುರಸ್ತಿ.	16.672	16.872	21.77
3054 ರಸ್ತೆ ಮತ್ತು ಸೇತುವೆ 04 ಜಿಲ್ಲಾ ಮುಖ್ಯ ರಸ್ತೆ 72 ಸಾ.ದುರಸ್ತಿ	32.321	37.989	42.21
ಒಟ್ಟು	49.193	54.861	63.96